## ಪ್ರಧಾನ ದಿವಾಣಿ ನ್ಯಾಯಾಧೀಶರು ಹಾಗೂ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಖಾನಾಪೂರ.

### ಸಿ.ಸಿ ನಂ: **101/2021**

ಪಿ.ಡಬ್ಲ್ಯೂ-**2**
ಸಿ.ಡಬ್ಲ್ಯೂ-**4**

ಹೆಸರು : ವಿಜಯ ಪಾಟೀಲ

ವಯಸ್ಸು : **24** ವರ್ಷ

ಉದ್ಯೋಗ : ಖಾಸಗಿ ಉದ್ಯೋಗಿ

ವಾಸ : ಲೊಕೊಳ್ಳಿ ಗ್ರಾಮ.

ದಿನಾಂಕ 19-12-2023 ರಂದು ಸಾಕ್ಷಿಗೆ ಪ್ರಮಾಣ ಬೋಧಿಸಲಾಯಿತು.

<u>ಮುಖ್ಯ ವಿಚಾರಣೆ : ಸಸಅ ರವರಿಂದ</u>

ಚಾ.ಸಾ.1 ನನ್ನ ತಾಯಿ. ಚಾ.ಸಾ.5 ನನ್ನ ತಂಗಿ. ಚಾ.ಸಾ.6 ರಿಂದ 9 ಗೊತ್ತು. ಆರೋಪಿಗಳು ಗೊತ್ತು. ದಿನಾಂಕ 25.08.2020 ರಂದು ನಾನು ನನ್ನ ಸ್ನೇಹಿತನನ್ನು ಬಿಡಲು ಬೈಕನಲ್ಲಿ ಹೋಗುತ್ತಿದ್ದು ಮಾರ್ಗ ಮಧ್ಯೆ ಬೈಕ ಬಂದಾಗಿದ್ದು, ಬೈಕನ್ನು ಸ್ಟಾರ್ಟ ಮಾಡಲು ಪ್ರಯತಿಸಿದ್ದು ಆರೋಪಿಗಳು ಏಕಾಏಕಿ ಸದರಿ ಸ್ಥಳಕ್ಕೆ ಬಂದು ಏನು ಮಾಡುತ್ತಿದ್ದೀಯಾ ಎಂದು ಕೇಳಿದ್ದು ಆಗ ನಾನು ಬೈಕನ್ನು ಸ್ಟಾರ್ಟ ಮಾಡಲು ಪ್ರಯತ್ನಿಸುತ್ತಿರುವುದಾಗಿ ಬೇರೆ ಏನನ್ನೂ ಮಾಡುತ್ತಿಲ್ಲವೆಂದು ತಿಳಿಸಿದ್ದರೂ ಆರೋಪಿಗಳು ಏಕಾ ಏಕಿ ನನ್ನ ಮೇಲೆ ಹಲ್ಲೆ ಮಾಡಿ ಕೈಯಿಂದ ಬಡೆದಿರುತ್ತಾರೆ. ಆರೋಪಿಗಳು ನನಗೆ ಕಣ್ಣಿಗೆ ಖಾರದ ಪುಡಿ ಎರಚಿರುತ್ತಾರೆ. ಆಗ ನನ್ನ ತಾಯಿ ಬಂದಿದ್ದು ಅವರನ್ನೂ ಸಹ ಆರೋಪಿತರು ಜಗ್ಗಾಡಿ ಹಲ್ಲೆ ಮಾಡಿರುತ್ತಾರೆ. ಆನಂತರ ನಮ್ಮ ತಾಯಿಯನ್ನು ನಾನು ಖಾನಾಪೂರ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಚಿಕಿತ್ಸೆ ನೀಡಿಸಿರುತ್ತೇನೆ. ಒಂದು ತಿಂಗಳ ನಂತರ ಈ ಬಗ್ಗೆ ಪೋಲೀಸರಿಗೆ ದೂರನ್ನು ನೀಡಿರುತ್ತೇನೆ. ಸಾಕ್ಷಿದಾರರು ಮುಂದುವರೆದು ನಾವು ಖಾನಾಪೂರ ಪೋಲೀಸ್ ಠಾಣೆಯಲ್ಲಿ ದೂರನ್ನು ನೀಡಲು ಹೋದಾಗ ದೂರನ್ನು ತೆಗೆದುಕೊಂಡಿರುವುದಿಲ್ಲ, ಆನಂತರ ನಾವು ಬೆಳಗಾವಿಗೆ ಹೋಗಿ ವಕೀಲರ ಮೂಲಕ ದೂರನ್ನು ನೀಡಿರುತ್ತೇನೆ. ಈ ಬಗ್ಗೆ ಪೋಲೀಸರಿಗೆ ಹೇಳಿಕೆ ನೀಡಿರುತ್ತೇನೆ.

***(**ಸಾಕ್ಷಿಯು ಭಾಗಶಃ ಪ್ರತಿಕೂಲವಾಗಿ ಸಾಕ್ಷ್ಯ ನುಡಿಯುತ್ತಿದ್ದುದರಿಂದ ಸಸಅ ರವರ ಕೋರಿಕೆಯ ಮೇರೆಗೆ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ, ಸಸಅ ರವರಿಗೆ ಪಾಟೀ ಸವಾಲು ಮಾಡಲು ಅನುಮತಿಸಲಾಯಿತು**.)***

<u>ಪಾಟೀ ಸವಾಲುಃ ಸಸಅ ರವರಿಂದ</u>

ಆರೋಪಿತರು ನನ್ನನ್ನು ಅಡ್ಡಗಟ್ಟಿ ಅವಾಚ್ಯ ಶಬ್ದಗಳಿಂದ ಬೈದು ಕೊಲೆ ಬೆದರಿಕೆ ಹಾಕಿರುತ್ತಾರೆಂದರೆ ಸರಿ.

<u>ಪಾಟೀ ಸವಾಲುಃ ಆರೋಪಿತರ ಪರ ಶ್ರೀ. ಎನ್.ಪಿ.ಕೆ. ವಕೀಲರಿಂದ</u>

ನಾನು ಹತ್ತನೇಯ ತರಗತಿಯವರೆಗೆ ವ್ಯಾಸಾಂಗ ಮಾಡಿರುತ್ತೇನೆ. ನಾನು ಇಂಗ್ಲಿಷ್ ಮಾಧ್ಯಮದಲ್ಲಿ ವ್ಯಾಸಾಂಗ ಮಾಡಿರುತ್ತೇನೆ. ನನಗೆ ಕನ್ನಡ ಓದಲು ಬರೆಯಲು ಬರುವುದಿಲ್ಲ. ಒಂದನೇ ಆರೋಪಿ ಸ್ಟೇಟಬ್ಯಾಂಕನಲ್ಲಿ ಕೆಲಸ ಮಾಡುತ್ತಾನೆಂದರೆ ಸರಿ. ಮೂರನೇ ಆರೋಪಿ ಮಿಲಿಟರಿಯಲ್ಲಿ ಕೆಲಸ ಮಾಡುತ್ತಿದ್ದು, ಎರಡನೇ ಆರೋಪಿ ಗೋವಾದಲ್ಲಿ ಕೆಲಸ ಮಾಡಿಕೊಂಡಿರುತ್ತಾರೆಂದರೆ ಸರಿ. ಆರೋಪಿತರು ನಮ್ಮ ಗ್ರಾಮದಲ್ಲಿ ಪ್ರತಿಷ್ಠಿತ ಕುಟುಂಬಕ್ಕೆ ಸೇರಿದವರಾಗಿರುತ್ತಾರೆಂದರೆ ಸರಿ. ಒಂದನೇ ಆರೋಪಿ ನಮ್ಮ ತಂದೆಯ ಗೆಳೆಯನಾಗಿರುತ್ತಾನೆಂದರೆ ಸರಿ. ಆರೋಪಿಗಳು ನನಗೆ 2014, 2018 ಹಾಗೂ 2020 ರಲ್ಲಿ ಹಲ್ಲೆ ಮಾಡಿರುತ್ತಾರೆ. ಸದರಿ ಸಂದರ್ಭಗಳಲ್ಲಿ ನಾನು ಪೋಲೀಸರಿಗೆ ದೂರನ್ನು ನೀಡಿರುತ್ತೇನೆ. ಸದರಿ ದೂರು ನೀಡಿದ ಪ್ರಕರಣಗಳ ಸಂಖ್ಯೆ ನನಗೆ ಗೊತ್ತಿಲ್ಲ. ನಾನು ನ್ಯಾಯಾಲಯದಲ್ಲಿ ಸುಮಾರು 10 ರಿಂದ 15 ಬಾರಿ ಬಂದು ಸಾಕ್ಷ್ಯವನ್ನು ಹೇಳಿರುತ್ತೇನೆ. ಯಾವ ಪ್ರಕರಣದಲ್ಲಿ ಬಂದು ಸಾಕ್ಷ್ಯವನ್ನು ನುಡಿದಿರುತ್ತೇನೆಂದು ಹೇಳಲು ಆಗವುದಿಲ್ಲ. ನಾನು ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ಯಾವುದೇ ಘಟನೆ ನಡೆದಿರುವುದಿಲ್ಲವೆಂದರೆ ಸರಿಯಲ್ಲ. ಅದೇ ರೀತಿ 10-15 ಬಾರಿ ನ್ಯಾಯಾಲಯದಲ್ಲಿ ಬಂದು ಸಾಕ್ಷ್ಯವನ್ನು ನುಡಿದಿರುವ ವಿಚಾರ ಸಹ ಸುಳ್ಳು ಎಂದರೆ ಸರಿಯಲ್ಲ.

ಆರೋಪಿಯು ನನ್ನ ಮೇಲೆ ಏನಕ್ಕೆ ಹಲ್ಲೆ ಮಾಡಿರುತ್ತಾರೆ ಹಾಗೂ ಅವರಿಗೂ ನನಗೂ ಏನಕ್ಕೆ ತಕರಾರು ಇರುತ್ತದೆಯೆಂದು ನನಗೆ ಗೊತ್ತಿಲ್ಲ. ನಮಗೂ ಹಾಗೂ ಆರೋಪಿತರಿಗೂ ಮೊದಲಿನಿಂದ ತಂಟೆ ಇತ್ತು ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಆರೋಪಿತರು ನನಗೆ ಬಂಬುವಿನಿಂದ ಹಲ್ಲೆ ಮಾಡಿರುತ್ತಾರೆ. ಅದೇ ರೀತಿ ನನಗೆ ಖಾರದ ಪುಡಿಯನ್ನೂ ಸಹ ಕಣ್ಣಿಗೆ ಎರಚಿರುತ್ತಾರೆ. 1, 2 ಮತ್ತು 4 ನೇ ಆರೋಪಿತರು ಬಂಬುವಿನಿಂದ ಹಲ್ಲೆ ಮಾಡಿದ್ದು, ಮೂರನೇ ಆರೋಪಿ ನನಗೆ ಖಾರದ ಪುಡಿಯನ್ನು ಎರಚಿರುತ್ತಾರೆ. ಸದರಿ ವಿಷಯವನ್ನು ನಾನು ಪೋಲೀಸರಿಗೆ ತಿಳಿಸಿರುತ್ತೇನೆ. ಸುಮಾರು ಅರ್ಧ ಗಂಟೆಯವರೆಗೆ ನನಗೆ ಬಂಬುವಿನಿಂದ ಹಲ್ಲೆ ಮಾಡಿರುತ್ತಾರೆ. ಬಂಬುವಿನಿಂದ ನನ್ನ ತಲೆಗೆ, ಬೆನ್ನು, ಕೈಕಾಲುಗಳಿಗೆ ಹಲ್ಲೆ ಮಾಡಿರುತ್ತಾರೆ. ನನಗೆ ಕಿವಿ ಮತ್ತು ಮೂಗಿನಿಂದ ರಕ್ತ ಬಂದಿರುತ್ತದೆ. ನಾನು ಹಾಕಿಕೊಂಡ ಜಾಕೇಟಿಗೆ ರಕ್ತವಾಗಿರುತ್ತದೆ. ಸದರಿ

ವಿಚಾರವನ್ನು ಪೋಲೀಸರಿಗೆ ತಿಳಿಸಿರುತ್ತೇನೆ. ಗಲಾಟೆಯಲ್ಲಿ ನಮ್ಮ ತಾಯಿ ಪ್ರಜ್ಞೆ ತಪ್ಪಿದ್ದು ಅವರನ್ನು ಕರೆದುಕೊಂಡು ಆಸ್ಪತ್ರೆಗೆ ಹೋಗಿರುತ್ತೇನೆ. ನನಗೆ ರಕ್ತಬರುವುದನ್ನು ವೈದ್ಯರು ನೋಡಿದ್ದರೂ ನಮ್ಮ ತಾಯಿಗೆ ಮಾತ್ರ ಚಿಕಿತ್ಸೆ ನೀಡಿರುತ್ತಾರೆ. ನಾನೇನೂ ಚಿಕಿತ್ಸೆ ಪಡೆದಿರುವುದಿಲ್ಲ. ನನಗೆ ಸಹ ಪೆಟ್ಟಾಗಿರುವುದಾಗಿ ವೈದ್ಯರಿಗೆ ತಿಳಿಸಿದ್ದು ಆದರೂ ಸಹ ಅವರು ನನ್ನನ್ನು ಸಹ ಪರೀಕ್ಷಿಸಿ ಚಿಕಿತ್ಸೆ ನೀಡಿರುವುದಿಲ್ಲ.

ಸುಮಾರು 45 ನಿಮಿಷದಿಂದ 1 ಗಂಟೆಯವರೆಗೆ ಗಲಾಟೆ ನಡೆದಿರುತ್ತದೆ. ನಾನು ಖಾಸಗಿ ವಾಹನದಲ್ಲಿ ನಮ್ಮ ತಾಯಿಯವರನ್ನು ಚಿಕಿತ್ಸೆಗೆ ಕರೆದುಕೊಂಡು ಬಂದಿರುತ್ತೇನೆ. ಸದರಿ ಖಾಸಗಿ ವಾಹನದ ನೊಂದಣಿ ಸಂಖ್ಯೆ ನನಗೆ ಹೇಳಲು ಆಗುವುದಿಲ್ಲ. ನಾವು ಆ ದಿನ 9.30 ಗಂಟೆಗೆ ಆಸ್ಪತ್ರೆಯಲ್ಲಿ ಇದ್ದೆವು. ಮರುದಿನ ಠಾಣೆಗೆ ಹೋಗಿರುತ್ತೇವೆ. ಠಾಣೆಯಲ್ಲಿ ರಕ್ತದ ಕಲೆಯಿದ್ದ ಶರ್ಟನ್ನು ತೋರಿಸಿದ್ದು ಪೋಲೀಸರು ಪೋಟೋ ತೆಗೆದಿರುತ್ತಾರೆ. ನನ್ನ ತಾಯಿಗೆ ರಕ್ತಗಾಯವೇನೂ ಆಗಿರಲಿಲ್ಲ. ನಾಲ್ಕನೇ ಆರೋಪಿ ನನ್ನ ವಿರುದ್ಧ ದೂರನ್ನು ನೀಡಿರುತ್ತಾರೆಂದರೆ ಸರಿ. ಸದರಿಯವರು ನನ್ನ ಮೇಲೆ ದೂರು ನೀಡಿದ ದ್ವೇಷದ ಹಿನ್ನೆಲೆಯಲ್ಲಿ ಆರೋಪಿತರ ಮೇಲೆ ಸುಳ್ಳು ದೂರನ್ನು ನೀಡಲಾಗಿರುತ್ತದೆಯೆಂದರೆ ಸರಿಯಲ್ಲ.

ಆರೋಪಿಗಳ ಮನೆಗೂ ನಮ್ಮ ಮನೆಗೂ ಸುಮಾರು 1 ಕಿ.ಮೀ. ಅಂತರವಿರುತ್ತದೆ. ನಾನು ಮುಖ್ಯ ವಿಚಾರಣೆಯಲ್ಲಿ ಹೇಳಿದ ಹಾಗೆ ಯಾವುದೇ ಘಟನೆ ನಡೆಯದಿದ್ದರೂ ಆರೋಪಿತರಿಗೆ ಬೆದರಿಸಲು ಸುಳ್ಳು ದೂರನ್ನು ನೀಡಿರುತ್ತೇನೆಂದರೆ ಸರಿಯಲ್ಲ. ಆರೋಪಿಗಳ ಮೇಲೆ ಸಮಾಜದಲ್ಲಿರುವ ವರ್ಚಸ್ಸನ್ನು ಕಡಿಮೆ ಮಾಡಲು ಸುಳ್ಳು ದೂರನ್ನು ನೀಡಿರುತ್ತೇನೆಂದರೆ ಸರಿಯಲ್ಲ. ಗಲಾಟೆಯಾದಾಗ ಸುಮಾರು 50 ರಿಂದ 55 ಜನ ಸದರಿ ಸ್ಥಳದಲ್ಲಿ ಇದ್ದರು. ಸದರಿಯವರುಗಳ ಹೆಸರು ನನಗೆ ಗೊತ್ತಿಲ್ಲ. ನಾನು ಹೇಳಿದ ಹಾಗೆ ಯಾವುದೇ ಘಟನೆ ನಡೆದಿರುವುದಿಲ್ಲವೆಂದರೆ ಸರಿಯಲ್ಲ. ಆರೋಪಿಗಳು ನನ್ನ ಮೇಲಾಗಲಿ, ನನ್ನ ತಾಯಿಯ ಮೇಲಾಗಲಿ ಹಲ್ಲೆ ಮಾಡಿರುವುದಿಲ್ಲವೆಂದರೆ ಸರಿಯಲ್ಲ. ಆರೋಪಿಗಳ ಮೇಲೆ ಸುಳ್ಳು ದೂರನ್ನು ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಯಿತು)
ಓ. ಹೇ. ಕೆ. ಸರಿ ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಖಾನಾಪೂರ.